ಓ.ಎಸ್. ನಂ. 197/2014
ಪಿ ಡಬ್ಲ್ಯೂ -2

ಓ.ಎಸ್. ನಂ. 197/2014
ಪಿ ಡಬ್ಲ್ಯೂ -2

**ಸಾಕ್ಷಿಯನ್ನು ದಿನಾಂಕ:23.09.2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**
**ಪಾಟೀಸವಾಲುಃ ಶ್ರೀ ಬಿ.ಹೆಚ್.ಎನ್. ವಕೀಲರಿಂದ**

**1.** ಈ ದಾವೆಯನ್ನು ನಿವೇಶನದ ಬಗ್ಗೆ ಹೂಡಿರುತ್ತಾರೆ. ಕ್ರಯ ಪತ್ರವನ್ನು ಯಾರು ಯಾರಿಗೆ ಬರೆದುಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಕ್ರಯ ಪತ್ರವನ್ನು ನೋಡಿರುತ್ತೇನೆ, ನನಗೆ ಅರ್ಥವಾಗಿರುವುದಿಲ್ಲ. ದಾವಾ ಸ್ವತ್ತನ್ನು ವಿಭಾಗ ಮಾಡಿಕೊಂಡ ಕಾಲಕ್ಕೆ ನಾನು ಹಾಜರಿರಲಿಲ್ಲ. ಹದ್ದುಬಸ್ತಿನಲ್ಲಿರುವುದರಿಂದ ದಾವಾ ಸ್ವತ್ತು ವಾದಿಗೆ ಬಂದಿರುತ್ತದೆ ಎಂದು ತಿಳಿದಿರುತ್ತದೆ. ನನ್ನ ಮನೆಯೂ ಸಹ ವಾದಿಯ ಮನೆಯ ಪಕ್ಕದಲ್ಲಿರುತ್ತದೆ ಎಂದರೆ ಸರಿ. ನಮ್ಮ ಮನೆಯ ಪಶ್ಚಿಮಕ್ಕೆ ಪ್ರತಿವಾದಿಯರ ಜಮೀನು ಇರುತ್ತದೆ ಎಂದರೆ ಸರಿ.

**2.** ನನಗೂ ಮತ್ತು ಪ್ರತಿವಾದಿಯ ನಡುವೆ ವಿಶ್ವಾಸ ಇರುವುದಿಲ್ಲ ಎಂದರೆ ಸರಿ. ನನಗೂ ಮತ್ತು ವಾದಿಯರಿಗೂ ಪರಿಚಯವಿರುತ್ತದೆ ಎಂದರೆ ಸರಿ. ವಾದಿಯು 30*40 ಅಳತೆಯಲ್ಲಿ

ಮನೆಯನ್ನು ಕಟ್ಟಿಕೊಂಡಿರುತ್ತಾರೆ. ವಾದಿಯ ಮನೆಯ ಪೂರ್ವಕ್ಕೆ-ರಸ್ತೆ, ಪಶ್ಚಿಮಕ್ಕೆ-ರಸ್ತೆ ನಂತರ ಪ್ರತಿವಾದಿಯ ಜಮೀನು, ಉತ್ತರಕ್ಕೆ-ಸರ್ಕಾರಿ ರಸ್ತೆ, ದಕ್ಷಿಣಕ್ಕೆ-ದೇವರಾಜಪ್ಪನ ಮನೆ ಇರುತ್ತದೆ. ಪ್ರತಿವಾದಿಯ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಪಶ್ಚಿಮ ದಿಕ್ಕಿಗೆ ಹಳೇ ಕಾಲದ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ಅದೇ ದಾರಿಯಲ್ಲಿ ಎಲ್ಲರೂ ಓಡಾಡುತ್ತಿದ್ದರು ಎಂದರೆ ಸರಿಯಲ್ಲ. ವೆಂಕಟಸ್ವಾಮಿಯವರು ವಾದಿಗೆ ಯಾವುದೇ ಕ್ರಯ ಪತ್ರ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯ ಯಾವುದೇ ವಿಚಾರಗಳೂ ಗೊತ್ತಿಲ್ಲದೇ ಇದ್ದರೂ, ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಹಿ/-**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**